# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

## ಚೌಡೇಶ್ವರಿ ವಾರ್ಡ್ ನಂ-02ರಲ್ಲಿ

## ದಿನಾಂಕ: 16-07-2022 ರಂದು ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ದಿನಾಂಕ: 16-07-2022 ರಂದು ಬೆಳಗ್ಗೆ 10.00 ಗಂಟೆಗೆ ಬಿ.ಬಿ.ಎಂ.ಪಿ ಯಲಹಂಕ ವಿಭಾಗದ ಕಛೇರಿಯಲ್ಲಿ ವಾರ್ಡ್ ನಂ-02ರ ವಾರ್ಡ್ ಸಮಿತಿಯ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ನೆಡೆದ ವಾರ್ಡ್ ಕಮಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 01 | ಶ್ರೀ.ಕೆ.ಎ. ಶಾಂತರಾಜ್ | ಸಹಾಯಕ ನಿರ್ದೇಶಕರು ಮತ್ತು ಹಾಗೂ ಬಿ.ಬಿ.ಎಂ.ಪಿ ನೋಡಲ್ ಅಧಿಕಾರಿಗಳು (ವಾರ್ಡ್ ನಂ-02) |
| 02 | ಶ್ರೀ.ನರಸಿಂಹಯ್ಯ | ಕಾರ್ಯದರ್ಶಿಗಳು ಮತ್ತು ಸಹಾಯಕ ಅಭಿಯಂತರರು (ವಾರ್ಡ್ ನಂ-02) |
| 03 | ಡಾ11 ಮಂಜುಳ ಎಸ್ | ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯ |
| 04 | ಶ್ರೀ.ಕೆ.ಎನ್. ಬಾಬುರೆಡ್ಡಿ | ಸಹಾಯಕ ಅಭಿಯಂತರರು (ವಿದ್ಯುತ್) |
| 05 | ಶ್ರೀ.ರಾಮು | ಪೊಲೀಸ್ ಸಬ್ ಇನ್ಸ್‌ಪೇಕ್ಟರ್ |
| 06 | ಶ್ರೀಮತಿ. ಸುನಂದಮ್ಮ | ಹಿರಿಯ ಆರೋಗ್ಯ ಪರಿವೀಕ್ಷಕರು |
| 07 | ಶ್ರೀ.ನಂದಶ್ರೀ | ಕಿರಿಯ ಆರೋಗ್ಯ ಪರಿವೀಕ್ಷಕರು |
| 08 | ಶ್ರೀ.ವಿನಯ ಕುಮಾರ್ ಪಿ.ಬಿ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 09 | ಶ್ರೀ. ಕುಮಾರಸ್ವಾಮಿ | ಜಾನುವಾರು ಅಧಿಕಾರಿಗಳು |
| | ಬಡಾವಣೆ ಕ್ಷೇಮಾಭಿವೃದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು/ಸಾರ್ವಜನಿಕರು | |
| 01 | ಶ್ರೀ.ಹೇಮರಾಜ್ | ಸ್ಥಳೀಯ ಮುಖಂಡರು |
| 02 | ಶ್ರೀ. ಅ.ಬ ಶಿವಕುಮಾರ್ | ಸ್ಥಳೀಯ ಮುಖಂಡರು |
| 03 | ಶ್ರೀ.ರಾಮರೆಡ್ಡಿ | ಸ್ಥಳೀಯ ನಿವಾಸಿಗಳು |
| 04 | ಶ್ರೀ.ಎ.ಎಸ್.ರಾಜು | ಸ್ಥಳೀಯ ನಿವಾಸಿಗಳು |
| 05 | ಶ್ರೀ.ಶ್ರೀನಿವಾಸಲು | ಸ್ಥಳೀಯ ನಿವಾಸಿಗಳು |
| 06 | ಶ್ರೀ.ವೆಂಕಟೇಶ್ | ಮಾರುತಿನಗರ |

| | | |
|---|---|---|
| 07 | ಹರಿನಾಥ | ಸಾರ್ವಜನಿಕರು |
| 08 | ಸುಚಿತ್ ಬಾಬು | ಸೈನಿಕ ವಿಹಾರ ಅಸೋಸಿಯೇಷನ್ ಕೆಂಚೇನಹಳ್ಳಿ |

ಶ್ರೀ.ನರಸಿಂಹಯ್ಯ ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ವಾರ್ಡ್ ನಂ-02 ರವರು ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರ ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೋಡೆಲ್ ಅಧಿಕಾರಿರವರನ್ನು ಕೋರಲಾಯಿತು.

ಶ್ರೀ.ಕೆ.ಎ.ಶಾಂತರಾಜ್ ಸಮಿತಿಯ ನೋಡೆಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿ ಈ ಹಿಂದಿನ ಸಭೆಯಲ್ಲಿ ಅಂದರೆ ದಿನಾಂಕ: 29-06-2022ರಂದು ನಡೆದ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದರು. ಹಾಗೂ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಸೂಚಿಸಿದರು. ಹಾಗೂ ಈ ಹಿಂದೆ ಕೈಗೊಂಡಿರುವ ಸಭೆಯ ನಡವಳಿಗಳನ್ನು ಸಭೆಯಲ್ಲಿ ವರದಿಯನ್ನು ಓದಲಾಯಿತು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ಚೌಡೇಶ್ವರಿ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿನ ಕೊಂಡಪ್ಪ ಬಡಾವಣೆ ಕಾಮಾಕ್ಷಮ್ಮ ಬಡಾವಣೆಯ ಹಂದಿಗಳ ಹಾವಳಿ ಜಾಸ್ತಿ ಆಗಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು, ಕೂಡಲೇ ಇದಕ್ಕೆ ಸೂಕ್ತ ಕ್ರಮ ವಹಿಸುವಂತೆ ಸ್ಥಳೀಯ ನಿವಾಸಿಗಳಾದ ಶ್ರೀ.ಎ.ಎಸ್.ರಾಜು ಹಾಗೂ ಹರಿನಾಥನ್ ರವರು ಸಭೆಯಲ್ಲಿ ಅಕ್ಷೇಪಣೆ ವ್ಯಕ್ತಪಡಿಸಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಜಾನುವಾರು ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿ ಹಂದಿಗಳ ಕಾಟ ಬಹಳ ದಿನಗಳಿಂದ ಉಂಟಾಗುತ್ತಿದ್ದು, ಜಂಟಿ ತಪಾಸಣೆ ಕೈಗೊಳ್ಳುವಂತೆ ಜಾನವಾರು ಅಧಿಕಾರಿಗಳಿಗೆ ಸೂಚಿಸಿದರು. | ಪಶುಸಂಗೋಪನಾ ಇಲಾಖೆ (ಜಾನುವಾರು ಅಧಿಕಾರಿಗಳು) |
| 02 | ಚೌಡೇಶ್ವರಿ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿರುವ ಚೌಡೇಶ್ವರಿ ಕಲ್ಯಾಣ ಮಂಟಪದಿಂದ ಕೊಂಡಪ್ಪ ಬಡಾವಣೆಯವರೆಗೆ ರಾಜಕಾಲುವೆಯಲ್ಲಿ ತುಂಬಿರುವ ಹೂಳನ್ನು ತೆಗೆಯುವಂತೆ ಸ್ಥಳೀಯ ನಿವಾಸಿಗಳಾದ ಶ್ರೀ.ಎ.ಎಸ್. ರಾಜು ರವರು ಸಭೆಯಲ್ಲಿ ಕೋರಿದರು | ಇದಕ್ಕೆ ಸಂಬಂಧಿಸಿದಂತೆ ನೋಡ್‌ಲ್ ಅಧಿಕಾರಿಗಳು ಮಾತನಾಡಿ ಸ್ಥಳ ಪರಿವೀಕ್ಷಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಅಭಿಯಂತರರು ವಾರ್ಡ್ ನಂ-02 ರವರಿಗೆ ಸೂಚಿಸಿದರು. | ಸಹಾಯಕ ಅಭಿಯಂತರರು ವಾರ್ಡ್ 2. |
| 03 | ಚೌಡೇಶ್ವರಿ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿರುವ ಕೋಗಿಲು ವೃತ್ತದಲ್ಲಿ ರಾಜಕಾಲುವೆಯಲ್ಲಿ ತುಂಬಿರುವ ಹೂಳನ್ನು ತೆಗೆಯುವಂತೆ ಸ್ಥಳೀಯ ನಿವಾಸಿಗಳಾದ ಶ್ರೀ.ಎ.ಎಸ್. ರಾಜು ರವರು ಸಭೆಯಲ್ಲಿ ಕೋರಿದರು | ಇದಕ್ಕೆ ಸಂಬಂಧಿಸಿದಂತೆ ನೋಡ್‌ಲ್ ಅಧಿಕಾರಿಗಳು ಮಾತನಾಡಿ ಸ್ಥಳ ಪರಿವೀಕ್ಷಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಅಭಿಯಂತರರು ವಾರ್ಡ್ ನಂ-02 ರವರಿಗೆ ಸೂಚಿಸಿದರು. ಮತ್ತು ಬೃಹತ್ ನೀರುಗಾಲುವೆ ಇಲಾಖೆಯವರಾದ ಶ್ರೀ.ಶ್ರೀನಿವಾಸ ಸಹಾಯಕ ಅಭಿಯಂತರರಿಗೆ ತಿಳಿಸಲು | ಸಹಾಯಕ ಅಭಿಯಂತರರು ವಾರ್ಡ್ 2. ಮತ್ತು ಬೃಹತ್ ನೀರುಗಾಲುವೆ ಇಲಾಖೆ. |

| | | | |
|---|---|---|---|
| | | ವಾರ್ಡ್‌ನ ಇಂಜಿನಿಯರ್ ರವರಿಗೆ ಸೂಚಿಸಿದರು. | |
| 04 | ಚೌಡೇಶ್ವರಿ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿರುವ ಪ್ರದೇಶಗಳಲ್ಲಿ ಕಾವೇರಿ ನೀರು ಪೂರೈಕೆ ಮಾಡಲು ನಿಖರವಾದ ಶುಲ್ಕವನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರು ತಿಳಿಸದೇ ಇರುವ ಬಗ್ಗೆ ಸ್ಥಳೀಯ ನಿವಾಸಿಗಳಾದ ಶ್ರೀ. ಎ.ಎಸ್.ರಾಜು ರವರು ಸಭೆಯಲ್ಲಿ ಕೋರಿದರು. | ಇದಕ್ಕೆ ಸಂಬಂಧಿಸಿದಂತೆ ನೋಡ್‌ಲ್ ಅಧಿಕಾರಿಗಳು ಮಾತನಾಡಿ ಸ್ಥಳ ಪರಿವೀಕ್ಷಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ತಿಳಿಸಿದರು | ವಿನಯ ಕುಮಾರ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 05 | ಚೌಡೇಶ್ವರಿ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿನ ಸಾರ್ವಜನಿಕರ ದೂರುಗಳಿಗೆ ಸಂಬಂದಿಸಿದಂತೆ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸಂಬಂದಿಸಿದ ಇಲಾಖೆಯ ಅಧಿಕಾರಿಗಳ / ಸಿಬ್ಬಂದಿಗಳ ದೂರವಾಣಿ ಸಂಖ್ಯೆಗಳನ್ನು ಸೂಚನಾ ಫಲಕದಲ್ಲಿ ಅಳವಡಿಸುವಂತೆ ಹಾಗೂ ಸಾರ್ವಜನಿಕರು ದೂರಿನ ಪತ್ರಗಳನ್ನು ಸಲ್ಲಿಸಲು ಪ್ರತಿ ವಾರ್ಡ್‌ಗೆ ದೂರು ಪೆಟ್ಟಿಗೆಯನ್ನು ಕಛೇರಿಗಳನ್ನು ಅಳವಡಿಸಲು ಸ್ಥಳೀಯ ಮುಖಂಡರಾದ ಶ್ರೀ.ಅ.ಬ ಶಿವಕುಮಾರ್ ರವರು ಸಭೆಯಲ್ಲಿ ಕೋರಿದರು. | ಇದಕ್ಕೆ ಸಂಬಂಧಿಸಿದಂತೆ ನೋಡ್‌ಲ್ ಅಧಿಕಾರಿಗಳು ಮಾತನಾಡಿ ಸ್ಥಳ ಪರಿವೀಕ್ಷಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಅಭಿಯಂತರರು ವಾರ್ಡ್ ನಂ-02 ರವರಿಗೆ ಸೂಚಿಸಿದರು. | ಸಹಾಯಕ ಅಭಿಯಂತರರು ವಾರ್ಡ್ 02. |
| 06 | ಚೌಡೇಶ್ವರಿ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿ ಬ್ಯಾನರ್‌ಗಳನ್ನು ಅಳವಡಿಸಿದ್ದು, ಮರಣ ಹೊಂದಿರುವ ಶ್ರದ್ಧಾಂಜಲಿ ಬ್ಯಾನರ್‌ಗಳನ್ನು ತೆಗೆದಿರುವುದಿಲ್ಲ ಇದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು ಕೂಡಲೇ ಈ ಬ್ಯಾನರ್‌ಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಶ್ರೀ.ಹೇಮರಾಜ್ ರವರು ಕೋರಿದರು. | ಇದಕ್ಕೆ ಸಂಬಂಧಿಸಿದಂತೆ ನೋಡ್‌ಲ್ ಅಧಿಕಾರಿಗಳು ಮಾತನಾಡಿ ಸ್ಥಳ ಪರಿವೀಕ್ಷಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ಅನಧೀಕೃತವಾಗಿ ಅಳವಡಿಸಿರುವ ಬ್ಯಾನರ್‌ಗಳನ್ನು ಕೂಡಲೇ ತೆರವುಗೊಳಿಸುವಂತೆ ಸಹಾಯಕ ಅಭಿಯಂತರರು ವಾರ್ಡ್ ನಂ-02 ರವರಿಗೆ ಸೂಚಿಸಿದರು. | ಸಹಾಯಕ ಅಭಿಯಂತರರು ವಾರ್ಡ್ 02 |
| 07 | ಚೌಡೇಶ್ವರಿ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿನ ಶೋಭ ಅಪಾರ್ಟ್‌ಮೆಂಟ್ ಮುಂಭಾಗ ಚರಂಡಿ ಮಾಡಿಸಿಕೊಡುವಂತೆ ನಾಗೇನಹಳ್ಳಿ ನಿವಾಸಿಗಳಾದ ಶ್ರೀ. ಶಿವಕುಮಾರ್ ರವರು ಸಭೆಯಲ್ಲಿ ಕೋರಿದರು. | ಇದಕ್ಕೆ ಸಂಬಂಧಿಸಿದಂತೆ ನೋಡ್‌ಲ್ ಅಧಿಕಾರಿಗಳು ಮಾತನಾಡಿ ಸ್ಥಳ ಪರಿವೀಕ್ಷಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಅಭಿಯಂತರರು ವಾರ್ಡ್ ನಂ-02 ರವರಿಗೆ ಸೂಚಿಸಿದರು. | ಸಹಾಯಕ ಅಭಿಯಂತರರು ವಾರ್ಡ್ 02. |
| 08 | ಚೌಡೇಶ್ವರಿ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿನ ಕೆಂಚೇನಹಳ್ಳಿ ರೈಲ್ವೆ ಕ್ರಾಸ್ ಹತ್ತಿರ ರಾತ್ರೋ ರಾತ್ರಿ ತುಂಬಾ ಗಲಾಟೆಗಳು ಉಂಟಾಗುತ್ತಿದ್ದು, ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸ್ಥಳೀಯ ನಿವಾಸಿಗಳಾದ ಶ್ರೀ.ಶಿವಕುಮಾರ್ ರವರು ತಿಳಿಸಿದರು. | ಇದಕ್ಕೆ ಸಂಬಂಧಿಸಿದಂತೆ ನೋಡ್‌ಲ್ ಅಧಿಕಾರಿಗಳು ಮಾತನಾಡಿ ಸ್ಥಳ ಪರಿವೀಕ್ಷಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಪೋಲಿಸ್ ಇನ್ಸ್‌ಪೆಕ್ಟರ್ ರವರಿಗೆ ತಿಳಿಸಿದರು | ಪೋಲಿಸ್ ಇನ್ಸ್‌ಪೇಕ್ಟರ್ ಯಲಹಂಕ ಉಪ ವಿಭಾಗ |

| | | | |
|---|---|---|---|
| 09 | ಕೆಂಚೇನಹಳ್ಳಿ ಸೈನಿಕ ವಿಹಾರ ಅಸೋಸಿಯೇಷನ್ ಸಂಘದ ಪರವಾಗಿ ಶ್ರೀ. ಸುಚಿತ್ ಬಾಬು ರವರು ಸಭೆಯಲ್ಲಿ ಹಾಜರಿದ್ದು, ಸದರಿ ಬಡಾವಣೆಯಲ್ಲಿನ ಚರಂಡಿಗಳಲ್ಲಿ ತುಂಬಿರುವ ಹೂಳನ್ನು ತೆಗೆಯಲು ಹಾಗೂ ಬಡಾವಣೆಯ ಎಲ್ಲಾ ಮನೆಗಳಿಗೆ ಪೈಪ್‌ಲೈನ್ ಅಳವಡಿಸಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿಕೊಡಬೇಕೆಂದು ಸಭೆಯಲ್ಲಿ ಕೋರಿದರು. | ಇದಕ್ಕೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಗಳು ಮಾತನಾಡಿ ಸ್ಥಳ ಪರಿವೀಕ್ಷಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಅಭಿಯಂತರರು ವಾರ್ಡ್ ನಂ-02 ರವರಿಗೆ ಸೂಚಿಸಿದರು. | ಸಹಾಯಕ ಅಭಿಯಂತರರು ವಾರ್ಡ್ 02. |

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

AE.02 18/7/2022

ಶ್ರೀ.ನರಸಿಂಹಯ್ಯ
ಸಹಾಯಕ ಅಭಿಯಂತರರು

ಶ್ರೀ.ಕೆ.ಎ.ಶಾಂತರಾಜ್
ಉಪ ನಿರ್ದೇಶಕರು ಹಾಗೂ
ನೋಡೆಲ್ ಅಧಿಕಾರಿಗಳು ವಾರ್ಡ್ ನಂ-02.

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ (ವಿದ್ಯುತ್) ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಯಲಹಂಕ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೇಸ್ಕಾಂ/ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಲಹಂಕ ಉಪ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
7. ಕಛೇರಿ ಕಡತಕ್ಕೆ.